# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**:08/2025

ಎಂ.ಡಬ್ಲ್ಯೂ-1

**<u>ದಿನಾಂಕ 18.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಶ್ರೀ.ಪಿ.ಪಿ.ಬಿ.ಆರ್. ವಕೀಲರಿಂದಃ**

ನಮ್ಮ ಸಂಸ್ಥೆಯಲ್ಲಿ ಕಾರ್ಮಿಕರಿಗೆ ಸಂಬಂಧಪಟ್ಟಂತೆ 9 ರಿಂದ 10 ಏಜೆನ್ಸಿಗಳು ಕೆಲಸ ಮಾಡುತ್ತಿರುತ್ತದೆ. ಸದರಿ ಎಲ್ಲಾ ಏಜೆನ್ಸಿಗಳ ಜೊತೆಗೆ ನಾವು ಒಂದು Service agreement ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಕರಾರಿನಲ್ಲಿ ಯಾವತರಹದ ಕಾರ್ಮಿಕರು ಬೇಕಾಗುತ್ತದೆ ಎಂದು ನಮೂದು ಮಾಡಿರುತ್ತೇವೆ ಎಂದರೆ ಸರಿ. ಕಾರ್ಮಿಕರಿಗೆ ಕೊಡಬೇಕಾಗಿರುವ ಇ.ಪಿ.ಎಫ್., ಪಿ.ಎಫ್. ಇ.ಎಸ್.ಐ. ಹಾಗೂ ಇತರೆ ಸೌಲಭ್ಯಗಳನ್ನು ಗುತ್ತಿಗೆದಾರರ ಏಜೆನ್ಸಿಗೆ ಕೊಡುತ್ತೇವೆ ಎಂದರೆ ಸರಿ. ಏಜೆನ್ಸಿಗಳು ನಮ್ಮ ಇಚ್ಚೆಯ ಪ್ರಕಾರ ಕೆಲಸ ಮಾಡುತ್ತಾರೆ ಎಂದರೆ ಸರಿ. Service agreement ಪ್ರಕಾರ ಏಜೆನ್ಸಿಗಳು ಏನಾದರು ಉಲ್ಲಂಘನೆ ಮಾಡಿದರೆ ಅಂತಹ ಏಜೆನ್ಸಿಗಳ ಜೊತೆ ಆಗಿರುವ ಕರಾರನ್ನು ರದ್ದು ಮಾಡುವ ಅಧಿಕಾರ ನಮಗೆ ಇರುತ್ತದೆ ಎಂದರೆ ಸರಿ.

1 ನೇ ಪಕ್ಷಗಾರರು ನಮ್ಮ ಸಂಸ್ಥೆಯಲ್ಲಿ ಹೊರ ಗುತ್ತಿಗೆಯ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 1 ನೇ ಪಕ್ಷಗಾರರು ನಮ್ಮ ಸಂಸ್ಥೆಯಲ್ಲಿ ದಿನಾಂಕಃ30.09.2005 ರಿಂದ 18.04.2024 ರವರೆಗೆ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡಿರುತ್ತಾರೆ ಎಂದರೆ ಸರಿ. ಮೊದಲು 1 ನೇ ಪಕ್ಷಗಾರರು S.Mac Securities Services ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಂತರ ಅವರು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಗೆ ಸಂಬಂಧಪಟ್ಟ ಕಚೇರಿ ನಮ್ಮ ಕಚೇರಿಯ ಆವರಣದಲ್ಲಿ ಇರುವುದಿಲ್ಲ.

ಹೊರ ಗುತ್ತಿಗೆಯ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಕಾರ್ಮಿಕರನ್ನು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯವರು ಗುರುತಿಸುತ್ತಾರೆ. 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯ ಮೇಲ್ ವಿಚಾರಕರು ಅಲ್ಲಿ ಕಾರ್ಮಿಕರನ್ನು ಗುರುತಿಸುವ ಕೆಲಸ ಮಾಡುತ್ತಿರುತ್ತಾರೆ. ನಮ್ಮ ಸಂಸ್ಥೆಯಿಂದ ಅಲ್ಲಿ ಕಾರ್ಮಿಕರನ್ನು ಗುರುತಿಸಲು ಯಾರು ಇರುವುದಿಲ್ಲ. ನಮ್ಮ ಸಂಸ್ಥೆಯಿಂದ ಕಾರ್ಮಿಕರನ್ನು ಗುರುತಿಸಲು ನಮ್ಮ ಮೇಲ್ ವಿಚಾರಕರು ಇರುತ್ತಾರೆ. ನಮ್ಮ ಸಂಸ್ಥೆಯಲ್ಲಿ bio-metric entry ಹಾಗೂ bio-metric exit ಎರಡು ಇರುತ್ತದೆ. ಸದರಿ ದಾಖಲೆ ನಮ್ಮ ಸಂಸ್ಥೆಯಲ್ಲಿ ಲಭ್ಯ ಇರುತ್ತದೆ ಎಂದರೆ ಸಾಕ್ಷಿ ಏಜೆನ್ಸಿ ರವರ ಬಳಿ ಇರುತ್ತದೆ ಎನ್ನುತ್ತಾರೆ. Employees associations ಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆಯನ್ನು ಸಹ ನಮ್ಮ ಸಂಸ್ಥೆಯಲ್ಲಿ ಇಟ್ಟಿರುವುದಿಲ್ಲ.

2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯ ಪರವಾಗಿ ಕೆಲಸ ಮಾಡುವ ಮೇಲ್ ವಿಚಾರಕರ ಹೆಸರು ರಾಜು ಮತ್ತು ಅನಂತರಾಜು ಆಗಿರುತ್ತದೆ. 1 ನೇ ಪಕ್ಷಗಾರರನ್ನು ಸದರಿ ರಾಜು ಮತ್ತು ಅನಂತರಾಜು ರವರು ಮೇಲ್ ವಿಚಾರಣೆ ಮಾಡುತ್ತಿದ್ದರು ಎಂದರೆ ಸರಿ. ದಿನಾಂಕಃ18.04.2024 ರಂದು 1 ನೇ ಪಕ್ಷಗಾರರಿಗೆ ರಾತ್ರಿ ಪಾಳೆಯಲ್ಲಿ ಕೆಲಸ ಇತ್ತು ಎಂದರೆ ಸರಿ. ಆ ದಿನ ಅವರು ಸಂಜೆ 07.30 ಸಮಯದಲ್ಲಿ bio-metric entry ಮಾಡುತ್ತಾರೆ ಎಂದರೆ ಸರಿ. ಮರು ದಿವಸ ಬೆಳಿಗ್ಗೆ 05.47 ರ ಸಮಯದಲ್ಲಿ ಅವರು bio-metric exit ಆಗಿರುತ್ತಾರೆ ಎಂದರೆ ಸರಿ. ಆ ದಿವಸ 1 ನೇ ಪಕ್ಷಗಾರರು ಒಟ್ಟು 10 ಗಂಟೆ 12 ನಿಮಿಷಗಳು ಕೆಲಸ ಮಾಡಿರುತ್ತಾರೆ ಎಂದರೆ ಸರಿ. 1 ನೇ ಪಕ್ಷಗಾರರು ಬೆಳಿಗ್ಗೆ exit ಆದಾಗ ಸದರಿ ರಾಜು ಮತ್ತು ಅನಂತರಾಜು ರವರು ಅವರನ್ನು ಪ್ರಶ್ನೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಅವರು total hours complete ಮಾಡಿರುವುದಿಲ್ಲ ಎಂದು ಪ್ರಶ್ನೆ ಮಾಡಿರುತ್ತಾರೆ ಎನ್ನುತ್ತಾರೆ.

ನಂತರ 1 ನೇ ಪಕ್ಷಗಾರರನ್ನು ಕೆಲಸದಿಂದ ತೆಗೆಯಲು ಸದರಿ ರಾಜು ಮತ್ತು ಅನಂತರಾಜು ರವರು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಗೆ ಹೇಳಿರುತ್ತಾರೆ ಎಂದರೆ ಸಾಕ್ಷಿ ಕರ್ತವ್ಯ ಲೋಪ ಆಗಿರುತ್ತದೆ ಎಂದು ನಾವು ಏಜೆನ್ಸಿ ರವರಿಗೆ ತಿಳಿಸಿರುತ್ತೇವೆ ಎನ್ನುತ್ತಾರೆ. ಸದರಿ ರಾಜು ಮತ್ತು ಅನಂತರಾಜು ರವರ ಶಿಫಾರಸ್ಸಿನ ಮೇರೆಗೆ ಅದೇ ದಿನ 1 ನೇ ಪಕ್ಷಗಾರರನ್ನು ಕೆಲಸದಿಂದ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಪಟ್ಟಂತೆ 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯಿಂದ ಯಾವುದೇ ವರಧಿಯನ್ನು ತರೆಸಿಕೊಂಡಿಲ್ಲ.

1 ನೇ ಪಕ್ಷಗಾರರಿಗೆ ಸಂಬಂಧಪಟ್ಟಂತೆ ಆಂತರಿಕ ವಿಚಾರಣೆ ನಡೆಸಿರುತ್ತೀರ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸಿರುತ್ತಾರೆ. 1 ನೇ ಪಕ್ಷಗಾರರಿಗೆ ಹಾಲು ಕುಡಿಯುವ ಮಗು ಇತ್ತು ಎಂದರೆ ನನಗೆ ಗೊತ್ತಿಲ್ಲ. 1 ನೇ ಪಕ್ಷಗಾರರಿಗೆ ಹಾಲು ಕುಡಿಯುವ ಮಗು ಇತ್ತು ಎನ್ನುವ ವಿಚಾರ ಗೊತ್ತಿದ್ದರೂ ಕೂಡ ರಾತ್ರಿ ಪಾಳೆಯಲ್ಲಿ ಅವರನ್ನು ಕೆಲಸದಲ್ಲಿ ನಿಯೋಜಿಸಿದ್ದಾರೆ ಎನ್ನುವ ವಿಚಾರ ಗೊತ್ತಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಬರುವಂತಹ ಕಾರ್ಮಿಕರ ಮೇಲೆ ಯಾವುದಾದರು ಕಾರ್ಮಿಕ ಕಾನೂನು ಉಲ್ಲಂಘನೆ ಮಾಡಿದರೆ ಅದನ್ನು ಪ್ರಶ್ನೆ ಮಾಡುವ ಅಧಿಕಾರ ಸಂಸ್ಥೆಗೆ ಇರುತ್ತದೆ ಎಂದರೆ ಸರಿ. 1 ನೇ ಪಕ್ಷಗಾರರ ವಿಚಾರದಲ್ಲಿ ನಾವು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯವರನ್ನು ನಾವು ಪ್ರಶ್ನೆ ಮಾಡಿರುವುದಿಲ್ಲ. ನಮ್ಮ ಸಂಸ್ಥೆಯವರಿಗೆ 1 ನೇ ಪಕ್ಷಗಾರರ ವಿಚಾರದಲ್ಲಿ ಪ್ರಾಥಮಿಕ ಜವಾಬ್ದಾರಿ ನಮಗೆ ಇದ್ದರೂ ಕೂಡ ನಾವು ಅದನ್ನು ಸರಿಯಾಗಿ ನಿರ್ವಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಇದನ್ನು ಪ್ರಶ್ನಿಸಿ 1 ನೇ ಪಕ್ಷಗಾರರು ಕಾರ್ಮಿಕ ಇಲಾಖೆಗೆ ಅರ್ಜಿ ಸಲ್ಲಿಸಿದ್ದು ನಾವು ಕೂಡ ಅದರಲ್ಲಿ ಭಾಗವಹಿಸಿರುತ್ತೇವೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**